ಇಂದು ದಿಃ**17-07-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು
ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಇ ಎಸ್ ಐ ಬಿ.ಎಚ್ ವಕೀಲರಿಂದ ವಾದಿಗಳ ಪರಃ**

ನಾನು ಬಿ ಎ ಪದವೀದರ ಇರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಊರು ಪಾಳ್ಯಾ ಗ್ರಾಮ ಇರುತ್ತದೆ. ವಾದಿ ಈ ದಾವೆಯನ್ನು ಏನು ಪರಿಹಾರ ಕೇಳಿ ಮಾಡಿದ್ದಾರೆಂದು ಮಾಹಿತಿ ಇದೆ . ಫಕ್ಕೀರವ್ವ ಇವಳಿಗೆ ಹನುಮಂತಪ್ಪ, ಹನುಮಕ್ಕ , ಬಸಣ್ಣ ಮತ್ತು ವಾದಿ ಮಕ್ಕಳು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಹನುಮಂತಪ್ಪನ ಹೆಂಡತಿ ಮಕ್ಕಳು ಎಂದರೆ ಸರಿ . 4 ರಿಂದ 9 ನೇ ಪ್ರತಿವಾದಿಯರು ಮತ್ತು ಲೋಕೇಶ ಮತ್ತು ಸರಸ್ವತಿ ಹನುಮಕ್ಕನ ಮಕ್ಕಳು ಎಂದರೆ ಸರಿ . ಪ್ರತಿವಾದಿ 6 , 10 ರಿಂದ 12 ಬಸಣ್ಣನ ಹೆಂಡತಿ ಮಕ್ಕಳು ಎಂದರೆ ಸರಿ . ವಾದಿ ಈ ದಾವೆಯಲ್ಲಿ ಏನು ದಾಖಲೆ ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡು ನನ್ನ ತಕರಾರನ್ನು ಹಾಕಿರುತ್ತೇನೆ. ಸರ್ವೇ ನಂ. 20/2 ಮತ್ತು 21/2 , ದಾವಾ ಆಸ್ತಿಗಳನ್ನು ಫಕ್ಕೀರವ್ವ ಖರೀದಿ ಮಾಡಿದ್ದು ಎಂದರೆ ಸರಿ . ಫಕ್ಕೀರವ್ವ ತನ್ನ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳ ಕುರಿತು ಮರಣ ಶಾಸನ , ದಾನಪತ್ರ ಅಥವಾ ಯಾವುದೇ ಕ್ರಯಪತ್ರ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಫಕ್ಕೀರವ್ವ ಇವಳ ಎಲ್ಲಾ ಮಕ್ಕಳಿಗೆ ಆಕೆಯ ಆಸ್ತಿಗಳಲ್ಲಿ ಸಮ ಪಾಲು ಇದೆ ಎಂದರೆ ಸಾಕ್ಷಿ ಮೊದಲು ಇತ್ತು ಈಗ ಇಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದಲ್ಲಿ ಪಾಲುವಿಭಾಗ ಮಾಡಿಕೊಳ್ಳುವ ಮೊದಲು ಅವರಿಗೆಲ್ಲಾ ಪಾಲು ಇತ್ತು , ಈಗ ಇಲ್ಲ .

ಪಾಲುವಿಭಾಗ ದಾಖಲೆಯನ್ನು ನಾನು ನೋಡಿಲ್ಲ. ಸಾಕ್ಷಿ ಆದರೆ ನನ್ನ ತಂದೆ ಪಾಲುವಿಭಾಗ ಆದ ನಂತರ ಖರೀದಿ ಮಾಡಿದ್ದು ಎಂದು ಹೇಳುತ್ತಾರೆ. ಬಸಣ್ಣ ಮತ್ತು

ಹನುಮಂತಪ್ಪ ಇವರ ನಡುವೆ ಪಾಲುವಿಭಾಗ ಆಗಿತ್ತು. ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟಿದ್ದರಾ ಎಂದರೆ ಸಾಕ್ಷಿ ನನ್ನ ತಂದೆ ಹನುಮಂತಪ್ಪ ಮತ್ತು ಬಸಣ್ಣ ಇವರನ್ನು ಕೇಳಿದ್ದರು , ಅವರು ಹೆಣ್ಣು ಮಕ್ಕಳಿಗೆ ಕೊಡಬೇಕಾಗಿದ್ದನ್ನು ಕೊಟ್ಟಿದ್ದೇವೆ, ಅವರು ಮೌಖಿಕವಾಗಿ ಬಿಟ್ಟು ಕೊಟ್ಟಿದ್ದಾರೆಂದು ಹೇಳಿದ ಕಾರಣ ನನ್ನ ತಂದೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಈ ವಿಷಯವನ್ನು ನಾನು ನನ್ನ ತಕರಾರಿನಲ್ಲಿ ಬರೆಸಿದ್ದೇನೆ. ಆ ರೀತಿ ನಾನು ನನ್ನ ತಕರಾರಿನಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ತಕರಾರನ್ನು ಸಲ್ಲಿಸುವ ಸಮಯದಲ್ಲಿ ಹಿಂದಿನ ದಾವೆಯ ದಾಖಲೆಗಳನ್ನು ಮತ್ತು ಎಫ್ ಡಿ ಪಿ ಯ ದಾಖಲೆಯನ್ನು ತೆಗೆಸಿಲ್ಲ. ಅಸಲು ದಾವಾ ನಂ. 116/1997 ರಲ್ಲಿ ಯಾರು ಯಾರು ಪಕ್ಷಗಾರರು ಇದ್ದರು ಮತ್ತು ಯಾರ ಯಾರ ನಡುವೆ ರಾಜೀ ಆಯಿತು ಎಂದು ನನ್ನ ತಂದೆಗೆ ಗೊತ್ತು , ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿ ಏನೇನು ದಾಖಲೆಗಳನ್ನು ಹಾಜರು ಪಡಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನಾನು ವಕೀಲರಿಗೆ ಏನೇನು ದಾಖಲೆ ಹಾಕಿದ್ದಾರೆಂದು ಕೇಳಿರುತ್ತೇನೆ. ವಕೀಲರು ನನಗೆ ಬೇರೆ ಆಸ್ತಿಗಳನ್ನು ಸೇರಿಸಿಲ್ಲ ಎಂದು ಹೇಳಿದರು. ಉಳಿದ ಆಸ್ತಿಗಳು ಯಾವುವು ಎಂದು ನನಗೆ ಗೊತ್ತಿಲ್ಲ.

ಅಸಲು ದಾವಾ ನಂ. 116/1997 ರಲ್ಲಿ ಹನುಮಂತಪ್ಪ ಮತ್ತು 6 ರಿಂದ 12 ನೇ ಪ್ರತಿವಾದಿಯರು ಫಕ್ಕೀರವ್ವ ಇವಳಿಗೆ ಉಳಿದ ಮಕ್ಕಳು ಇರುವ ವಿಷಯವನ್ನು ತಿಳಿಸದೇ ಡಿಕ್ರಿ ಪಡೆದರು ಎಂದರೆ ಗೊತ್ತಿಲ್ಲ. ಸಾಕ್ಷಿ ಆದರೆ ನನ್ನ ತಂದೆಗೆ ಎಲ್ಲಾ ಹೆಣ್ಣು ಮಕ್ಕಳಿಗೆ ರಾಜೀ ಮಾಡಿಕೊಟ್ಟಿದ್ದೇವೆ ಖರೀದಿ ಮಾಡಿ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನನ್ನ ತಂದೆಗೆ ಹೆಣ್ಣು ಮಕ್ಕಳಿಗೆ ಕೊಡಬೇಕಾದುದನ್ನು ಕೊಟ್ಟಿದ್ದೇವೆಂದು ಹೇಳಿದ್ದರೂ ಎಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಮಾರಾಟ ಮಾಡಿರುವ ಜಮೀನಿನಲ್ಲಿ ಫಕ್ಕೀರವ್ವ ಇವಳ ಎಲ್ಲಾ ಮಕ್ಕಳಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮೊದಲು ಇತ್ತು ಎಂದು ಹೇಳುತ್ತಾರೆ. ಹನುಮಂತಪ್ಪ ಮಾರಾಟ ಮಾಡಿದ್ದು , ಕಾನೂನು ಬಾಹಿರ ಮತ್ತು ಶಾಂತಮ್ಮ ಇವಳಿಗೆ ಲಾಗು ಆಗುವುದಿಲ್ಲ ಎಂದರೆ ಸಾಕ್ಷಿ ನಿಜ ಎಂದು ಹೇಳುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕ್ರಯ ಪತ್ರ ಆದ ನಂತರ ಆಗಿರುವ ಹಕ್ಕು ಬಿಟ್ಟ ಪತ್ರ ಕಾನೂನು ಬಾಹಿರ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.